# ಪ್ರಾರ್ಥನೆ

*ಸ್ವಾಮಿ ವಿವೇಕಾನಂದ ವಿರಚಿತ ಶಿವಸ್ತುತಿಯಿಂದ*

ನಿಖಿಲಭುವನ ಜನ್ಮಸ್ಥೇಮಭಂಗಪ್ರರೋಹಾಃ
ಅಕಲಿತಮಹಿಮಾನಃ ಕಲ್ಪಿತಾ ಯತ್ರ ತಸ್ಮಿನ್ ।
ಸುವಿಮಲಗಗನಾಭೇ ಈಶಸಂಸ್ಥೇಽಪ್ಯನೀಶೇ
ಮಮ ಭವತು ಭವೇಽಸ್ಮಿನ್ ಭಾಸುರೋ ಭಾವಬಂಧಃ ॥

ಅವನ ಮಹಿಮೆಯನ್ನು ಬಣ್ಣಿಸಲು ಅಸದಳ. ಅವನು ಶುಭ್ರತೆಯಲ್ಲಿ ಆಕಾಶವನ್ನು ಹೋಲುವನು. ಅವನಲ್ಲಿ ನಿಖಿಲ ಪ್ರಪಂಚದ ಸೃಷ್ಟಿ-ಸ್ಥಿತಿ-ಪ್ರಳಯಗಳ ಕಾರ್ಯವು ಕಲ್ಪಿತವಾಗಿದೆ. ವಿಶ್ವಕ್ಕೆಲ್ಲ ಒಡೆಯನಾದರೂ ತನಗೆ ಒಡೆಯನಿಲ್ಲದ ಶಿವನ ಪಾದಪದ್ಮದಲ್ಲಿ ಪ್ರಜ್ವಲಿಸುವ ನನ್ನ ಈ ಜೀವನದ ಭಕ್ತಿ ನೆಲಸಲಿ.

ನಿಹತನಿಖಿಲಮೋಹೇಽಧೀಶತಾ ಯತ್ರ ರೂಢಾ
ಪ್ರಕಟಿತಪರಪ್ರೇಮ್ಣಾ ಯೋ ಮಹಾದೇವಸಂಜ್ಞಃ ।
ಅಶಿಥಿಲಪರಿರಂಭಃ ಪ್ರೇಮರೂಪಸ್ಯ ಯಸ್ಯ
ಹೃದಿ ಪ್ರಣಯತಿ ವಿಶ್ವಂ ವ್ಯಾಜಮಾತ್ರಂ ವಿಭುತ್ವಮ್ ॥

ಮೋಹವನ್ನು ನಾಶಮಾಡುವ ಶಿವನಲ್ಲಿ ಈಶತ್ವ ಸದಾ ನೆಲಸಿರುವುದು. ಪ್ರಕಟವಾದ ಮಹಾಪ್ರೇಮದಿಂದ ಮಹಾದೇವನೆಂಬ ಹೆಸರು ಅವನಿಗೆ ಸಲ್ಲುವುದು. ಆ ಶಿವನ ಪರಮಪ್ರೇಮದಿಂದ ಕೂಡಿದ ಆಲಿಂಗನವು ವಿಶ್ವದ ಪ್ರಭುತ್ವವೂ ಕೂಡ ಒಂದು ಮಾಯೆ ಎಂಬ ಭಾವವನ್ನು ಹೃದಯದಲ್ಲಿ ಉಂಟುಮಾಡುವುದು.

ವಹತಿ ವಿಪುಲವಾತಃ ಪೂರ್ವಸಂಸ್ಕಾರರೂಪಃ
ಪ್ರಮಥತಿ ಬಲವೃಂದಂ ಘೂರ್ಣಿತೇವೋರ್ಮಿಮಾಲಾ।
ಪ್ರಚಲತಿ ಖಲು ಯುಗ್ಮಂ ಯುಷ್ಮದಸ್ಮತ್ಪ್ರತೀತಂ
ಅತಿ ವಿಕಲಿತರೂಪಂ ನೌಮಿ ಚಿತ್ತಂ ಶಿವಸ್ಥಮ್ ॥

ಬಿರುಗಾಳಿ ಬೀಸಿ ಅಲೆಯನ್ನು ಎಬ್ಬಿಸುವಂತೆ ಪೂರ್ವಸಂಸ್ಕಾರ ಎಂಬ ಮಹಾಬಿರುಗಾಳಿ ಬೀಸಿ "ನಾನು", "ನೀನು" ಎಂಬ ಅಲೆಗಳನ್ನು ಉಂಟುಮಾಡಿದೆ. ಶಿವನಲ್ಲಿ ನೆಲಸಿರುವ ಅಂತಹ ವಿಕಲಿತರೂಪವಾಗಿದ್ದ ಮನಸ್ಸನ್ನು ನಾನು ನಮಿಸುವೆನು.

## ಸೂಕ್ತಿಪ್ರಭ

**ಸತ್ಯಕ್ಕಾಗಿ** ಸರ್ವವನ್ನೂ ಸಮರ್ಪಿಸಬಹುದು, ಆದರೆ ಸತ್ಯವನ್ನು ಮತ್ತಾವುದಕ್ಕೂ ತೆರುವುದಕ್ಕೆ ಆಗುವುದಿಲ್ಲ.

**ಇಲ್ಲಿ,** ಈ ದೇಹದಲ್ಲಿರುವಾಗ ದೇವರಲ್ಲಿ ಬಾಳಬೇಕು ಬದುಕಬೇಕು.

**ಶಕ್ತಿ** ಇರುವುದು ಸಾಧುಸ್ವಭಾವದಲ್ಲಿ, ಚಾರಿತ್ರ್ಯ ಶುದ್ಧಿಯಲ್ಲಿ.

**ನೀವು** ಒಳಗಿನಿಂದ ಹೊರಗೆ ಬೆಳೆಯಬೇಕಾಗಿದೆ. ಯಾರೂ ನಿಮಗೆ ಬೋಧಿಸಲಾರರು. ಯಾರೂ ನಿಮ್ಮನ್ನು ಆಧ್ಯಾತ್ಮಿಕ ಜೀವಿಗಳನ್ನಾಗಿ ಮಾಡಲಾರರು. ನಿಮಗೆ ನಿಮ್ಮ ಆತ್ಮನಲ್ಲದೆ ಬೇರೆ ಗುರುವಿಲ್ಲ.

**ಯಾರ** ಹೃದಯಗ್ರಂಥ ತೆರೆದಿದೆಯೋ ಅವರಿಗೆ ಬೇರೆ ಗ್ರಂಥಗಳು ಬೇಕಾಗಿಲ್ಲ.

**ಇಂದು** ನಿನ್ನ ಕಾಲಿನ ಕೆಳಗೆ ಹರಿದಾಡುತ್ತಿರುವ ಕೀಟ ಭವಿಷ್ಯದ ದೇವರು.

**ನೀವು** ನಾಲಗೆಯನ್ನು ಹರಿಯಬಿಟ್ಟರೆ ಅನಂತರ ಇತರ ಇಂದ್ರಿಯಗಳೂ ತಮ್ಮಿಚ್ಛೆ ಬಂದಂತೆ ಹೋಗುವುವು.

**ನಾವು** ಯಾವಾಗಲೂ ನಮ್ಮ ದುರ್ಬಲತೆ ಶಕ್ತಿಯಂತೆ ಕಾಣುವಂತೆ, ಉದ್ವೇಗ ಪ್ರೀತಿಯಂತೆ ಕಾಣುವಂತೆ, ನಮ್ಮ ಹೇಡಿತನ ಧೈರ್ಯದಂತೆ ಕಾಣುವಂತೆ ಮಾಡಲು ಯತ್ನಿಸುತ್ತಿರುವೆವು.

**ನಾಸ್ತಿಕ** ದಾನಿಯಾಗಬಹುದು, ಆದರೆ ಧಾರ್ಮಿಕನಾಗಲಾರ. ಆದರೆ ಧಾರ್ಮಿಕಜೀವಿ ದಾನಿಯಾಗಿಯೇ ಇರಬೇಕು.

ಸ್ವಾಮಿ ವಿವೇಕಾನಂದ